ವ್ಯವಸ್ಥೆ ನೇಪಾಳದಲ್ಲಿ ಅಸ್ತಿತ್ವದಲ್ಲಿತ್ತು.

ಜಾತಿ ಆಧಾರಿತ ಅಸ್ಪೃಶ್ಯತೆಯನ್ನು ಸ್ಪಷ್ಟವಾಗಿ ನಿಷೇಧಿಸಿದ 1963ರ ಮುಲುಕಿ ಐನ್‌ನ ಪರಿಷ್ಕರಣೆ ಮತ್ತು ಅಂತಹ ಆಚರಣೆಗಳನ್ನು ಔಪಚಾರಿಕವಾಗಿ ನಿಷೇಧಿಸಿದ 1990ರ ಪ್ರಜಾಸತಾತ್ಮಕ ಸಂವಿಧಾನವು ಸೇರಿದಂತೆ ಜಾತಿ ಆಧಾರಿತ ತಾರತಮ್ಯವನ್ನು ನಿರ್ಮೂಲನೆ ಮಾಡುವ ಗುರಿ ಹೊಂದಿರುವ ಸಾಕಷ್ಟು ಕಾನೂನಾತ್ಮಕ ಸುಧಾರಣೆಗಳು ಇದ್ದರೂ, ಈ ಜಡ ವ್ಯವಸ್ಥೆ ವ್ಯಾಪಕವಾಗಿ ಉಳಿದುಬಿಟ್ಟಿದೆ. ನೇಪಾಳದ ಸಂವಿಧಾನ ಸಭೆಯ ಮೂಲಕ ರಚಿತವಾದ 2015ರ ಸಂವಿಧಾನವು ಜಾತಿ ವ್ಯವಸ್ಥೆಯನ್ನ ಬಲವಾಗಿ ಖಂಡಿಸಿತು. ಮುಂದುವರಿದು, 2017ರ ಮುಲುಕಿ ಅಪರಾಧ ಸಂಹಿತೆಯು ಜಾತಿ ಆಧಾರಿತ ತಾರತಮ್ಯವನ್ನು ಗಂಭೀರ ಅಪರಾಧವೆಂದು ವ್ಯಾಖ್ಯಾನಿಸಿ ಆಚರಿಸುವವರಿಗೆ ಕಟ್ಟುನಿಟ್ಟಿನ ಶಿಕ್ಷೆಯನ್ನು ವಿಧಿಸಿದೆ.

◆ **ಕೇವಲ ಕಾನೂನಿನಿಂದ ಜಾತಿ ವ್ಯವಸ್ಥೆ ಹೋಗುತ್ತಾ? ಒಟ್ಟಾರೆ ನಮ್ಮ ಜನ ಬದಲಾಗದ ಹೊರತು ಇದು ಕಷ್ಟಸಾಧ್ಯ ಅಲ್ವಾ?**

ರಾಜಕೀಯವಾಗಿ 'ಕಠ್ಮಂಡು' ಎರಡು ಅತಿರೇಕಗಳ ನಡುವೆ ಹಂಚಿ ಹೋಗಿದೆ ಅನ್ನಿಸುತ್ತೆ. ಒಂದು ಕಡೆ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಚೀನಾದ ಪ್ರಭಾವ ಮತ್ತದರಿಂದ ಹುಟ್ಟಿಕೊಂಡ ತೀವ್ರವಾದ ಎಡವಾದ. ಇನ್ನೊಂದು ಕಡೆ ಬಲಪಂಥೀಯ ರಾಜಕಾರಣಕ್ಕೆ ಬೀಜ ಬಿತ್ತುವ ಸಾಂಪ್ರದಾಯಿಕ 'ಹಿಂದೂ ರಾಷ್ಟ್ರ' ಎಂಬ ಹಣೆ ಪಟ್ಟಿ...

◆ **ಕೋಮುವಾದ ಮತ್ತು ಅಸ್ಪೃಶ್ಯತೆಯ ಆಚರಣೆ ಅಲ್ಲಿ ಹೇಗಿದೆ?**

ನೇಪಾಳದಲ್ಲಿ ತಾರತಮ್ಯ ಮತ್ತು ಅಸ್ಪೃಶ್ಯತೆ ವಿಷಯಕ್ಕೆ ಬಂದಾಗ, ಬಹಿರಂಗವಾದ ತಾರತಮ್ಯವು ಬಹುತೇಕ ಅಸ್ತಿತ್ವದಲ್ಲಿಲ್ಲ. ಆದರೆ, ದೇವಸ್ಥಾನಗಳು ಅಥವಾ ಧಾರ್ಮಿಕ ಸಮಾರಂಭಗಳಲ್ಲಿ ಮತ್ತು ಕೌಟುಂಬಿಕ ಆಚರಣೆಗಳಲ್ಲಿ ದಲಿತ ವ್ಯಕ್ತಿಗಳು ಗುರುತಿಸಲ್ಪಟ್ಟರೆ ಅಂಥವರ ಪ್ರವೇಶವನ್ನು ನಿರಾಕರಿಸಲಾಗುತ್ತದೆ. ಉದಾಹರಣೆಗೆ, ಚುನಾಯಿತ ಪ್ರತಿನಿಧಿಯೊಬ್ಬರ ಮನೆಯಲ್ಲಿ ನಡೆದ 'ಉಪನಯನ' ಸಮಾರಂಭದಲ್ಲಿ ದಲಿತನೊಬ್ಬ ಊಟ ಮುಟ್ಟಿದ ಎಂಬ ಕಾರಣಕ್ಕೆ ದೊಡ್ಡ ಗದ್ದಲವಾಯಿತು. ನಂತರ, ಪ್ರಜಾ ಪ್ರತಿನಿಧಿಯ ವಿರುದ್ಧ ಕಾನೂನು ಪ್ರಕರಣವನ್ನು ದಾಖಲಿಸಲಾಯಿತು ಮತ್ತು ಜೈಲು ಶಿಕ್ಷೆಯನ್ನು ವಿಧಿಸಲಾಯಿತು. ನನ್ನ ಸ್ವಂತ ಊರಾದ ಚಿತ್ವಾನ್ ಜಿಲ್ಲೆಯ ಭರತ್‌ಪುರದಲ್ಲಿ, 2021ರಲ್ಲಿ, ನವರಾತ್ರಿಯ ಅಷ್ಟಮಿ ದಿನದಂದು, ದುರ್ಗಾ ಪೂಜೆಯ ಸಮಯದಲ್ಲಿ ದೇವಸ್ಥಾನದಲ್ಲಿ ಪೂಜೆ ಮಾಡುವ ಅವಕಾಶಕ್ಕಾಗಿ ಒತ್ತಾಯಿಸಿದ ದಲಿತ ವ್ಯಕ್ತಿಯನ್ನು ಇಬ್ಬರು ದಲಿತೇತರರು ಹೊಡೆದು ಕೊಂದರು. ಈ ಪ್ರಕರಣ ಕೂಡ ನ್ಯಾಯಾಲಯದ ಮೆಟ್ಟಿಲೇರಿತ್ತು. ಇಂತಹ ಘಟನೆಗಳು ಯಾವಾಗಲೂ ನಡೆಯುವುದಿಲ್ಲ. ಆದರೆ ತಾರತಮ್ಯದ ವಿರುದ್ಧ ಕಾನೂನು ನಿಷೇಧಗಳ ಹೊರತಾಗಿಯೂ, ಮೇಲ್ಜಾತಿಗಳೆಂದು ಕರೆಯಲ್ಪಡುವವರಲ್ಲಿ ಆಳವಾಗಿ ಬೇರೂರಿರುವ ಜಾತಿ ಮೇಲರಿಮೆಯ ದುರಹಂಕಾರವನ್ನು ಸಾಂದರ್ಭಿಕವಾಗಿ ನಡೆಯುವ ಇಂತಹ ಘಟನೆಗಳು ಬಹಿರಂಗಪಡಿಸುತ್ತವೆ.

◆ **ನೀವೊಬ್ಬ ಪತ್ರಕರ್ತೆಯಾಗಿ, ನ್ಯಾಯವಾದಿಯಾಗಿ ಹೇಳಿ... ಅಲ್ಲಿ ಮಕ್ಕಳ ಮತ್ತು ಮಹಿಳೆಯರ ಸ್ಥಿತಿಗತಿ ಹೇಗಿದೆ?**

ನೇಪಾಳದ ನ್ಯಾಯಾಂಗವು ಸಾಂಸ್ಥಿಕ ಭ್ರಷ್ಟಾಚಾರದ ಭದ್ರಕೋಟೆ ಅನ್ನೋದು ಇತ್ತೀಚೆಗೆ ನನಗೆ ಚೆನ್ನಾಗಿ ಅರ್ಥವಾಗಿದೆ. ಕಾನೂನು ಅಭ್ಯಾಸದಲ್ಲಿ ವಿಸ್ತಾರವಾದ ಅನುಭವ ನನಗಿಲ್ಲದಿದ್ದರೂ ಆರ್ಥಿಕವಾಗಿ ಹಿಂದುಳಿದವರಿಗೆ ಮತ್ತು ರಾಜಕೀಯ ಪ್ರಭಾವ ಇಲ್ಲದವರಿಗೆ ನ್ಯಾಯವು ಕೇವಲ ಆರ್ಥಿಕ ಪರಿಭಾಷೆಯಲ್ಲಿ ಮಾತ್ರವಲ್ಲದೆ ಸಾಮಾಜಿಕ ಮತ್ತು ಭಾವನಾತ್ಮಕ ಆಯಾಮಗಳಲ್ಲಿಯೂ ಬಹಳ ದುಬಾರಿಯಾಗಿದೆ. ಅನೇಕ ಸಂದರ್ಭಗಳಲ್ಲಿ, ಪೊಲೀಸರು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಚಾರ್ಜ್‌ಶೀಟ್ ಕೂಡ ಸಲ್ಲಿಸುವುದಿಲ್ಲ. ನ್ಯಾಯಾಲಯವನ್ನು ತಲುಪಿದ ಪ್ರಕರಣಗಳಲ್ಲಿ ನ್ಯಾಯ ಸಿಗಬೇಕಾದವರೇ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುವಂತಾಗುತ್ತದೆ. ಹೀಗಿದ್ದೂ ನ್ಯಾಯಕ್ಕಾಗಿ ದೃಢತೆಯಿಂದ ಮುನ್ನಡೆಯುವವರಿಗೆ ಯಾವ ರಕ್ಷಣೆ ಸಿಗದೆ ಅವರು ಬೆದರಿಕೆ ಮತ್ತು ಹಿಂಸೆಗೆ ಗುರಿಯಾಗಬೇಕಾಗುತ್ತದೆ. ಅವರು ಅನುಭವಿಸಿದ ಮಾನಸಿಕ ಹಿಂಸೆಯು ಕಡೆಗಣಿಸುವಂತದ್ದಲ್ಲ. ನಾನು ಕೆಲಸ ಮಾಡಿದ ಕೆಲವು ಪ್ರಕರಣಗಳಲ್ಲಿ, ಕಾನೂನು ಪ್ರಕ್ರಿಯೆಯಲ್ಲಿ ಗೆದ್ದವರಿಗೂ ಮಾನಸಿಕ ಸಮಾಲೋಚನೆಯ ವ್ಯವಸ್ಥೆ ಮಾಡಬೇಕಾಗಿ ಬಂದಿತ್ತು.